**C.C. No. 3328-2021**

**PW-1**

**ವಿಶ್ವನಾಥ**

**ದಿನಾಂಕಃ 22-07-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .**

**ಮುಂದುವರೆದ ಪಾಟೀ ಸವಾಲು ಃ ಆರೋಪಿ ಪರವಾಗಿ ಶ್ರೀ. ಎಸ್.ಜಿ.ಡಿ. ವಕೀಲರಿಂದಃ**

4. ನಾನು ಮೂಲತಃ ಬಿಜಾಪುರದವನು. ಆರೋಪಿಯು ಮೂಲತಃ ಬಿಜಾಪುರದ ಇಂಡಿ ತಾಲೂಕಿನವನು. 2011 ರಿಂದ 2018 ರವರೆಗೆ ಜೋಯಿಡಾದ ನಿವಾಸಿಯಾಗಿದ್ದೆ. ತದನಂತರ 2018 ರಿಂದ 2021 ರವರೆಗೆ ಮಂಗಳೂರುನಲ್ಲಿ ವಾಸವಾಗಿದ್ದೆ. 2021 ಕ್ಕೆ ಮರಳಿ ಜೋಯಿಡಾಕ್ಕೆ ಬಂದು 2023 ರವರೆಗೆ ಅಲ್ಲಿಯೇ ವಾಸವಾಗಿದ್ದೆ.

5. ನಾನು ಆರೋಪಿಯ ಜೊತೆ ಕೈಗಡ ಸಾಲದ ಕರಾರು ಪತ್ರ ಅಥವಾ ಬೇರೆ ಯಾವುದೇ ದಾಖಲೆಗಳನ್ನು ಮಾಡಿಸಿಕೊಂಡಿಲ್ಲ. ನಾನು ಆರೋಪಿಗೆ ಈ ಪ್ರಕರಣ ದಾಖಲಿಸುವ ಮುನ್ನ ಯಾವುದೇ ನೋಟೀಸನ್ನು ನೀಡಯೇ ಇಲ್ಲ ಎಂದರೆ ಸರಿಯಲ್ಲ. ನಾನು ಮಿಲಾಗ್ರಿಸ ಬ್ಯಾಂಕನಲ್ಲಿ ಸಾಲ ಪಡೆದು ಅದನ್ನು ಮರುಪಾವತಿ ಮಾಡದ ಕಾರಣ ಅವರು ನನ್ನ ವಿರುದ್ದ ಪಿ.ಸಿ.ಅರ್ ನಂಬರ. 30/2019 ರಂತೆ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ದಿಃ 13-03-2021 ರಂದು ಆರೋಪಿಯೇ ನನ್ನ ಪರವಾಗಿ ನೀಡಬೇಕಾದ ಹಣವನ್ನು ನೀಡಿದ್ದರೂ ಎಂದರೆ ಸರಿ.

6. ನಿಪಿ 1 ರಲ್ಲಿ ಬರವಣಿಗೆ ಮತ್ತು ಇಂಕ್ ಬೇರೆ ಬೇರೆ ಇದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಆರೋಪಿ ನನಗೆ ಅದೇ ರೀತಿ ನೀಡಿದ್ದರು ಎಂದು ನುಡಿಯುತ್ತಾರೆ. ನಿಪಿ 1 ನ್ನು ನನಗೆ ದಿಃ 26-11-2018 ರಂದು ಅರೋಪಿಯು ಅವರ ಮನೆಯಲ್ಲಿ ನನಗೆ ನೀಡಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಅವರು ಮಾತ್ರ ಮನೆಯಲ್ಲಿ ಇದ್ದೇವು. ಆರೋಪಿಯ ಹೆಸರು ಮದನ್

ಮೋಹನ ಹಂಜಿಗೆ  ಅವರು ಜೋಯಿಡಾದ ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ. ನಾನು ನೀಡಿದ ನೋಟೀಸ ಆರೋಪಿಗೆ ದಿಃ 11-02-2021 ರಂದು ತಲುಪಿರುತ್ತದೆ.

7. ಆರೋಪಿಗೆ ನೋಟೀಸ ತಲುಪಿಯೇ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಸ್ನೇಹಿತನಾದ ಕಾರಣ ಅವರ ಮನೆಗೆ ಹೋದಾಗ ಅವರಿಗೆ ಸೇರಿದ ಚೆಕ್ಕನ್ನು ತೆಗೆದುಕೊಂಡು ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಿಪಿ 1 ನ್ನು ಹೊರತು ಪಡಿಸಿ ಆರೋಪಿಯ ಮತ್ತಷ್ಟು ಚೆಕ್ಕಗಳು ನನ್ನ ಹತ್ತಿರ ಇವೆ ಎಂದರೆ ಸರಿಯಲ್ಲ. ಆರೋಪಿಯೇ ನನಗೆ ಹಣ ನೀಡಿದ್ದರು ಸಹಿತ, ನಾನು ಆರೋಪಿಗೆ ಹಣ ನೀಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ದಿಃ 20-07-2019 ರಂದು ಅರೋಪಿಗೆ ನಾನು ನನ್ನ ವಕೀಲರ ಮುಖಾಂತರ ಸುಳ್ಳು ನೋಟೀಸನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ದಾಂಡೇಲಿ.**